# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 10-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ದರ 3 ಶೇಕಡಾ ಹೆಚ್ಚಳ

ವ್ಯಾಪಾರಿಗಳಿಂದ ಉತ್ತಮ ಬೇಡಿಕೆಯಿಂದಾಗಿ ಮಲೇಶಿಯನ್ ಪಾಮೆಣ್ಣೆ ದರ 3 ಶೇಕಡಾಕ್ಕೂ ಅಧಿಕ ಹೆಚ್ಚಳವಾಗಿ (3.25 ಶೇಕಡಾ, 106 ರಿಂಗಿಟ್ಸ್) ಪ್ರತಿ ಟನ್‌ಗೆ 3370 ($ 730.70) ಆಗಿದೆ. ಮೇ ತಿಂಗಳ ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ 1.45 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಹಾಗೂ ಈ ವರ್ಷ ಉತ್ತರಾರ್ಧದಲ್ಲಿ ಎಲ್ ನಿನೋ ಹವಾಮಾನದ ಪ್ರಭಾವದಿಂದ ಅಲ್ಲಿನ ಪಾಮೆಣ್ಣೆ ಉತ್ಪಾದನೆ ಇಳಿಕೆಯಾಗಲಿದೆಯೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ.

## ದರ ಇಳಿಕೆ ತಮಿಳುನಾಡಿನಲ್ಲಿ ಗೋಡಂಬಿ ಬೆಳೆಗಾರರು ಪರ್ಯಾಯ ಬೆಳೆಗಳತ್ತ

ಪ್ರತಿವರ್ಷ ತಮಿಳುನಾಡಿನಲ್ಲಿ ಸುಮಾರು 4 ಲಕ್ಷ ಟನ್‌ಗಳಿಗಿಂತ ಅಧಿಕ ಗೋಡಂಬಿ ಸಂಸ್ಕರಣೆಯಾಗುತ್ತಿದೆಯೆನ್ನಲಾಗಿದ್ದು, ಮುಂದಿನ ವರ್ಷ 5 ಲಕ್ಷ ಟನ್ ತಲುಪಲಿದೆಯೆನ್ನಲಾಗಿದೆ. ಸ್ಥಳೀಯವಾಗಿ 45000 ಟನ್ ಕಚ್ಚಾ ಗೋಡಂಬಿ ಲಭ್ಯವಾಗುತ್ತಿದ್ದು, ಉಳಿದ 3,55,000 ಲಕ್ಷ ಟನ್ ಕಚ್ಚಾ ಗೋಡಂಬಿ ಆಫ್ರಿಕಾ ಮುಂತಾದ ದೇಶಗಳಿಂದ ಆಮದಾಗುತ್ತಿದೆಯೆನ್ನಲಾಗಿದೆ. ಸಂಸ್ಕರಣೆಗೊಂಡ ಸುಮಾರು 75000 ಟನ್  ಗೋಡಂಬಿ ತಿರುಳು ಸಿಂಗಾಪುರ, ಮಲೇಶಿಯಾ ಹಾಗೂ ಯು.ಎ.ಇ ಗಳಿಗೆ ಪ್ರತಿ ವರ್ಷ ರಫ್ತಾಗುತ್ತಿದೆಯೆನ್ನಲಾಗಿದೆ. ವಿಯೆಟ್ನಾಂನಿಂದ ಅನಧಿಕೃತವಾಗಿ ಗೋಡಂಬಿ ತಿರುಳು ಆಮದಾಗುತ್ತಿದ್ದು ಸ್ಥಳೀಯ ತಿರುಳಿಗಿಂತ ಕಡಿಮೆ ದರ ಹೊಂದಿದೆಯೆನ್ನಲಾಗಿದೆ. ಸ್ಥಳೀಯ ಸಂಸ್ಕರಣೆದಾದರು ಇದರಿಂದ ಸಂಕಷ್ಟಕ್ಕೊಳಗಾಗಿದ್ದಾರೆನ್ನಲಾಗಿದೆ. ಹಿಂದಿನ ವರ್ಷಗಳಲ್ಲಿ ಉತ್ತಮ ಆದಾಯ ತರುತ್ತಿದ್ದ ಗೋಡಂಬಿ ಬೆಳೆ ಪ್ರಸ್ತುತ ದರ ಇಳಿಕೆಯಿಂದ ಆದಾಯ ಕಡಿಮೆಯೆನ್ನಲಾಗಿದೆ. ಇದರಿಂದ ಬೆಳೆಗಾರರು ಹಲಸು, ಬಾಳೆ ಮುಂತಾದ ಪರ್ಯಾಯ ಕೃಷಿಗಳತ್ತ ವಾಲಿದ್ದಾರೆನ್ನಲಾಗಿದ್ದು, ಮುಂದಿನ ವರ್ಷಗಳಲ್ಲಿ ಉತ್ಪಾದನೆ ಇನ್ನೂ ಇಳಿಕೆಯಾದರೆ ಸಂಸ್ಕರಣೆದಾರರಿಗೆ ದೇಶೀ ಗೋಡಂಬಿ ಲಭ್ಯತೆ ಕಡಿಮೆಯಾಗುವ ಸಾಧ್ಯತೆಯಿದೆ. ಗೋಡಂಬಿಯ ಹಣ್ಣು ದೊಡ್ಡ ಪ್ರಮಾಣದಲ್ಲಿ ತಮಿಳುನಾಡಿನಲ್ಲಿ ವ್ಯರ್ಥವಾಗುತ್ತಿದ್ದು, ಸಮರ್ಥವಾಗಿ ಮೌಲ್ಯವರ್ಧಿತಗೊಂಡರೆ ಸುಮಾರು 20 ಶೇಕಡಾ ಅಧಿಕ ಆದಾಯ ಗಳಿಸಬಹುದೆನ್ನಲಾಗಿದೆ. ಶೆಲ್‌ಗಳಿಂದ ಸಿ ಎನ್ ಎಚ್ ಎಣ್ಣೆ ಹಾಗೂ ಕಾರ್ಡನಾಲ್ ಉತ್ಪಾದಿಸಲಾಗುತ್ತಿದೆಯೆನ್ನಲಾಗಿದೆ.

## ಅಕ್ಕಿ ರಫ್ತು ದರ ಹೆಚ್ಚಳ

ಪಾರಾ ಬಾಯಿಲ್ಡ್ ಮತ್ತಿತರ ಅಕ್ಕಿಯ ರಫ್ತು ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಭಾರತ, ವಿಯೆಟ್ನಾಂ ಅಕ್ಕಿಗಳ ರಫ್ತು ದರ ಹೆಚ್ಚಳವಾಗಿದೆ.

## ನಾಫೆಡ್ ನಿಂದ 20 ಶೇಕಡಾ ದಾಸ್ತಾನು ಕಡ್ಲೆ ಬೇಳೆಯಾಗಿ ಪರಿವರ್ತನೆ

ಹೆಚ್ಚುವರಿ ದಾಸ್ತಾನು ಹೊಂದಿರುವುದರಿಂದ ನಾಫೆಡ್ ದಾಸ್ತಾನಿನ ಕಡ್ಲೆಯ 20 ಶೇಕಡಾ ಬೇಳೆಯಾಗಿ  ಪರಿವರ್ತಿಸಲು ಯೋಜಿಸುತ್ತಿದೆಯೆನ್ನಲಾಗಿದೆ. ಇದನ್ನು ಚಿಲ್ಲರೆ ಮಾರುಕಟ್ಟೆಗೆ ಬಿಡಲು ಯೋಜಿಸಿದೆಯೆನ್ನಲಾಗಿದೆ. ಹಿಂದಿನ ಮೂರು ವರ್ಷಗಳಲ್ಲಿ ಹೆಚ್ಚುವರಿ ಖರೀದಿ ನಡೆಸಿರುವುದರಿಂದ ಕಾಪು ದಾಸ್ತಾನು ಮಿಗತೆಯಿದೆಯೆನ್ನಲಾಗಿದೆ